ಎನ್ನುವ ಮಹಿಳೆ ಇದನ್ನು ಸಂಪಾದಿಸಿ ಪ್ರಕಟಿಸಿದರು. ಆನಂತರದಲ್ಲಿ ಲೀಲಾವತಿಯವರು 'ಹರಿಹರನ ಐದು ರಗಳೆಗಳು' ಎನ್ನುವ ಪುಟ್ಟ ಕೃತಿಯನ್ನು ಸಂಪಾದಿಸಿ ಪ್ರಕಟಿಸಿದರು. ಆ ಬಳಿಕ ನನ್ನ 'ಪುರಾತನರ ಚರಿತೆ' 1976ರಲ್ಲಿ ಪ್ರಕಟವಾಯಿತು. ಅದಲ್ಲದೆ ಹಿರಿಯ ಲೇಖಕಿ ಕಮಲಾ ಹಂಪನಾ ಅವರು ಕೆಲವು ಪುಸ್ತಕಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಟಿ.ಎನ್. ನಾಗರತ್ನ ಅವರು ಹರಿದಾಸ ಸಾಹಿತ್ಯ ಸಂಪಾದನೆಯಲ್ಲಿ ಹಿರಿದಾದ ಕೆಲಸ ಮಾಡಿದ್ದಾರೆ. ಹಿಂದೆ ಸಂಪಾದನ ವಿಭಾಗದಲ್ಲಿ ಇದ್ದದ್ದು ನಾನೊಬ್ಬಳೇ ಮಹಿಳೆ. ಈಗ ಹೆಣ್ಣುಮಕ್ಕಳೇ ಹೆಚ್ಚಾಗಿ ಈ ವಿಭಾಗದಲ್ಲಿ ಇದ್ದಾರೆ. ಆದರೆ, 39 ವರ್ಷಗಳಷ್ಟು ದೀರ್ಘಕಾಲ ಈ ಕ್ಷೇತ್ರದಲ್ಲಿ ನಾನು ಸಕ್ರಿಯವಾಗಿದ್ದುದರಿಂದ ಮಹಿಳೆಯರಲ್ಲಿ ನನಗೆ ಸ್ವತಂತ್ರವಾಗಿ ಹೆಚ್ಚು ಕೃತಿಗಳನ್ನು ಸಂಪಾದಿಸಿ ಪ್ರಕಟಿಸಲು ಸಾಧ್ಯವಾಯಿತು.

- **ನೀವು ಹಳಗನ್ನಡ ಹಸ್ತಪ್ರತಿಗಳನ್ನು ಸಂಪಾದಿಸಿ ಗ್ರಂಥ ಪ್ರಕಟಿಸುತ್ತಾ ಬಂದಿರಿ. ಹೀಗಿದ್ದವರು ಜಾನಪದ ವಿಶ್ವಕೋಶ ಸಂಪಾದನೆಗೂ ಕೈ ಜೋಡಿಸಿದಿರಿ. ಇದು ಹೇಗೆ ಸಾಧ್ಯವಾಯಿತು?**

ನಾನು ನಮ್ಮೂರಿನ ಪರಿಸರದ ಜನಪದ ಸಂಸ್ಕೃತಿಯನ್ನು ಅದರ ಸಮೃದ್ಧಿಯನ್ನು ಚಿಕ್ಕಂದಿನಿಂದಲೆ ಗಮನಿಸುತ್ತಾ ಬಂದಿದ್ದೇನೆ. ನಮ್ಮ ತಾಲ್ಲೂಕಿನ ಜನಪದ ಕಥೆ, ಕಾವ್ಯಗಳ ಕುರಿತು ಮತಿಘಟ್ಟ ಕೃಷ್ಣಮೂರ್ತಿ ಅವರು ಕೆಲಸ ಮಾಡಿದ್ದನ್ನು ಬಿಟ್ಟರೆ ಹೆಚ್ಚಿನ ಸಂಶೋಧನೆ, ಸಂಗ್ರಹ, ಕ್ಷೇತ್ರಕಾರ್ಯಗಳಾಗಿರಲಿಲ್ಲ. ಮಲೆನಾಡಿನ ಭಾಗವಂತೂ ಜಾನಪದ ಅಧ್ಯಯನಕ್ಕೆ ಕನ್ನೆನೆಲವಾಗಿತ್ತು. ನನ್ನ ಗ್ರಂಥ ಸಂಪಾದನ ಕಾರ್ಯವನ್ನು ಗಮನಿಸಿದ್ದ ಹ.ಕ. ರಾಜೇಗೌಡರಿಂದಾಗಿ ಜಾನಪದ ಅಕಾಡೆಮಿ ವತಿಯಿಂದ ರಾಯಚೂರಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ನನಗೊಂದು ಪ್ರಬಂಧ ಮಂಡಿಸಲು ಪ್ರಥಮವಾಗಿ ಕರೆಬಂತು. 'ಪ್ರಾಚೀನ ಸಾಹಿತ್ಯದಲ್ಲಿ ಜಾನಪದ' ಅನ್ನುವ ಕುರಿತು. ಮಹಿಳೆಯೊಬ್ಬರ ಸವಾಲು ಸ್ವೀಕರಿಸಿ ಆ ಕ್ಷೇತ್ರದಲ್ಲೂ ಕೆಲಸ ಮಾಡಿ ಪುಸ್ತಕ ಪ್ರಕಟಿಸಲು ತೀರ್ಮಾನಿಸಿದೆ. ಮೊದಲಿಗೆ ನಮ್ಮ ಬೇಲೂರು ತಾಲ್ಲೂಕಿನ ಇಬ್ಬೀಡು ಗ್ರಾಮದ ಸುತ್ತಮುತ್ತಲಿನ ಜನಪದ ಕಥೆ ಹಾಡುಗಳನ್ನು ಸಂಗ್ರಹಿಸಿ 'ಇಬ್ಬೀಡಿನ ಜನಪದ ಕಥೆಗಳು' ಎಂದು ಪ್ರಕಟಿಸಿದೆ. ಇಬ್ಬರು ವಕ್ತೃಗಳಿಂದ ಸಂಗ್ರಹಿಸಿ, ಸಂಪಾದಿಸಿ ಆ ಕಥೆಗಳ ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ, ತೌಲನಿಕ ಅಧ್ಯಯನ ಮಾಡಿ ಸುದೀರ್ಘ ಮುನ್ನುಡಿಯೊಂದಿಗೆ ಪ್ರಕಟಿಸಿದೆ. ಮುಂದೆ ಅದು ಗುಲ್ಬರ್ಗ ವಿಶ್ವವಿದ್ಯಾಲಯದ ಜಾನಪದ ವಿದ್ಯಾರ್ಥಿಗಳಿಗೆ ಪಠ್ಯವಾಯಿತು. ಇಬ್ಬೀಡಿನ ಜನಪದ ಕಥೆಗಳು ಕೃತಿಗೆ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 1986ರ ಶ್ರೇಷ್ಠ ಗದ್ಯಕೃತಿ ಪ್ರಶಸ್ತಿ ದೊರಕಿತು. ಮುಂದೆ 'ಮಲೆನಾಡು ಶೈವ ಒಕ್ಕಲಿಗರು—ಜಾನಪದೀಯ ಅಧ್ಯಯನ', 'ಪುಟ್ಟಮಲ್ಲಿಗೆ ಹಿಡಿತುಂಬ' ಇತ್ಯಾದಿ ಪುಸ್ತಕಗಳನ್ನು ಪ್ರಕಟಿಸಿದೆ. 'ಜಾನಪದ ಆಂತರ್ಯ', 'ಜಾನಪದ ಭಿತ್ತಿ', 'ಕನ್ನಡ ಸಾಹಿತ್ಯದಲ್ಲಿ ಜಾನಪದೀಯ ನೆಲೆಗಳು', 'ಜಾನಪದ ಚಹರೆ', 'ಜಾನಪದ ಅಡುಗೆ' – ಎಲ್ಲವನ್ನು ಕ್ಷೇತ್ರಕಾರ್ಯದ ಆಧಾರದಿಂದ ಬರೆದು ಪ್ರಕಟಿಸಿದೆ. ಅನಂತರ 'ಮಲೆನಾಡಿನ ಶೈವಒಕ್ಕಲಿಗರು' ಪ್ರಕಟಿಸಿದೆ. ಆವರೆಗೂ ಒಕ್ಕಲಿಗ ಸಮುದಾಯದ ಸಂಪ್ರದಾಯಗಳನ್ನು ಸಾರಾ ಸಗಟಾಗಿ ಒಂದೇ ಅನ್ನುವಂತೆ ಬರೆಯುತ್ತಿದ್ದರು. ಒಕ್ಕಲಿಗರೆಂದರೆ ಒಂದೇ ಎನಿಸಿದರೂ ಅವರಲ್ಲಿಯ ಸಂಪ್ರದಾಯಗಳಲ್ಲಿ ಭಿನ್ನತೆಯನ್ನು ಗುರುತಿಸಿದೆ. ಹೀಗೆ ಜಾನಪದದಲ್ಲಿ ಹನ್ನೊಂದು ಕೃತಿಗಳನ್ನು ಪ್ರಕಟಿಸಿದೆ. ಹಳಗನ್ನಡ ಸಂಪಾದನೆಗಿಂತ ಜಾನಪದ ಕ್ಷೇತ್ರದ ಕೆಲಸಗಳು ಕಡಿಮೆ ಅವಧಿಯಲ್ಲಿ ಹೆಚ್ಚು ಹೆಸರು ತಂದುಕೊಟ್ಟವೆನ್ನಬಹುದು. ಪ್ರಶಸ್ತಿ ಪುರಸ್ಕಾರಗಳೂ ಸಿಕ್ಕವು. ಈ ಅನುಭವದ ಹಿನ್ನೆಲೆಯಲ್ಲಿ ಜಾನಪದ ವಿಷಯ ವಿಶ್ವಕೋಶದಲ್ಲಿ ಕೆಲಸ ಮಾಡಿರುವೆ. ಈ ಕೋಶಕ್ಕೆ ಹದಿನೆಂಟು ವೈಯಕ್ತಿಕ ಲೇಖನಗಳನ್ನು ಬರೆದುದಲ್ಲದೆ ನೂರಾರು ವಿಭಿನ್ನ ಲೇಖನಗಳನ್ನು ಪರಿಷ್ಕರಿಸಿದ್ದೇನೆ.